ತಿನ್ನುತ್ತಿದೆ ರಭಸದಲ್ಲಿ. ಚೈನಾ ಲಾಟೀನು ನೇತಾಡುತ್ತಿದೆ. ಅದರಲ್ಲಿ ಬೆಳಕಿಲ್ಲ. ಈಗ ಪರಿಪೂರ್ಣ ಕತ್ತಲು. ಮಳೆ ಈಗ ಏಕತಾನತೆಯನ್ನು ಪಡೆದುಕೊಂಡಿದೆ. ಐದು ಉಣ್ಣೆಯ ಕಂಬಳಿಗಳನ್ನು ಒಂದು ಮರದ ಟೇಬಲ್ಲಿನ ಮೇಲೆ ಒಂದರ ಮೇಲೆ ಒಂದನ್ನು ಪೇರಿಸಿ ಇಡಲಾಗಿದೆ. ಮತ್ತೆ ಮಿಂಚು. ಈಗ ಉಣ್ಣೆಯ ಕಂಬಳಿಗಳ ಮೇಲೆ ಕುಳಿತುಕೊಂಡಿದ್ದ ಬೆಕ್ಕಿನ ಮೇಲೆ ಬಡಿಯಿತು. ಅದು ಅಲ್ಲಿಂದ ಆಗ ಕ್ಷಣದಲ್ಲಿಯೇ ಕತ್ತಲೊಳಗೆ ಕರಗಿತು.

ಎರಡು ದೇಹಗಳು ಬೇಸಗೆಯ ಮರಳಗಾಡಿನ ದಿಬ್ಬಗಳು. ಏರಿಳಿತಗಳ ಉಬ್ಬುಗಳು. ಬೇಸಗೆಯ ಮರಳುಗಾಡು ಎರಡು ದೇಹಗಳು. ಅವು ಕರಗಿವೆ ಅಲ್ಲಿ ಒಂದರೊಳಗೊಂದು. ಮತ್ತು ಅಸ್ತಿತ್ವವ ಕಳೆದುಕೊಂಡಿವೆ. ಆದರೆ ಉಸಿರು ಅಸ್ತಿತ್ವಗಳ ಪಡೆಯುತಿದೆ.

ಅವನು ಜಾಹಿರಾತು ಕಂಪನಿಯೊಂದರಲ್ಲಿ ಕ್ರಿಯೇಟಿವ್ ಹೆಡ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ. ಅವನ ಜಾಹಿರಾತುಗಳಿಂದಾಗಿ ಕೆಲವು ಕಂಪನಿಗಳ ವಸ್ತುಗಳ ಖರೀದಿ ಜಾಸ್ತಿಯಾಗಿತ್ತು. ಮತ್ತು ಅಧಿಕ ಲಾಭವನ್ನು ತಂದುಕೊಟ್ಟಿತ್ತು. ಹಾಗಾಗಿ ಅನೇಕ ಕಂಪನಿಗಳು ಅವನು ಕೆಲಸ ಮಾಡುತ್ತಿರುವ ಜಾಹಿರಾತು ಕಂಪನಿಗೆ ತಾವು ತಯಾರಿಸುವ ವಸ್ತುಗಳನ್ನು ಜನರಿಗೆ ತಲುಪಿಸುವುದಕ್ಕಾಗಿ ಅವನಿಂದ ಜಾಹಿರಾತುಗಳನ್ನು ತಯಾರಿಸಿಕೊಳ್ಳಲು ತುಂಬ ಬೇಡಿಕೆಗಳನ್ನು ಇಡುತ್ತಿದ್ದರು. ಮತ್ತು ಅವನು ಅದರಲ್ಲಿ ಯಶಸ್ವಿಯೂ ಆಗಿದ್ದ. ಜಾಹಿರಾತು ತಯಾರಿಸುವುದರ ಜೊತೆಗೆ ಅವನಿಗೆ ಕತೆ ಬರೆಯುವ ಹವ್ಯಾಸವೂ ಇತ್ತು. ಅವನು ಸುಮಾರು ಒಂದು ತಿಂಗಳಿನಿಂದ ಒಂದು ಕತೆಯನ್ನು ಬರೆಯಲು ಒದ್ದಾಡುತ್ತಿದ್ದ. ಅದು ಸಾಧ್ಯವಾಗದ ಕಾರಣ ಹಿಮಾಲಯದ ಯಾವುದಾದರೂ ಒಂದು ಗಿರಿಧಾಮಕ್ಕೆ ಹೋಗಿ ಒಂಟಿಯಾಗಿ ಒಂದು ವಾರ ಇದ್ದು ಕತೆಯನ್ನು ಬರೆದುಕೊಂಡು ಬರಲು ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದ. ಅವನು ಎಲ್ಲಿಗೆ ಹೋದರೂ ತನ್ನ ಹೆಂಡತಿ ಮತ್ತು ಮಗಳನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದ. ಆದರೆ ಈಗ ಅವನಿಗೆ ಒಬ್ಬನೇ ಹೋಗಿ ಕತೆಯನ್ನು ಸಂಪೂರ್ಣವಾಗಿ ಬರೆದು ಮುಗಿಸಿಕೊಂಡು ಬರುವವನಾಗಿದ್ದುದರಿಂದ ಇದನ್ನು ಅವರಿಗೆ ಹೇಳಿರಲಿಲ್ಲ. ಬದಲಿಗೆ ತನ್ನ ಕಂಪನಿಯ ಒಂದು ಮೀಟಿಂಗಿನಲ್ಲಿ ಭಾಗವಹಿಸುವ ಸಲುವಾಗಿ ಹೋಗುವುದಾಗಿ ಹೇಳಿದ್ದ. ಆದರೆ ಪ್ರತಿ ಸಾರಿಯಂತೆ ಈ ಸಲವೂ ತನ್ನ ಹೆಂಡತಿ ಮತ್ತು ಮಗಳನ್ನು ಕರೆದಿದ್ದ. ಆದರೆ ಮಗಳಿಗೆ ಪರೀಕ್ಷೆ ಇದ್ದುದರಿಂದ ಮಗಳು ಹೋಗಲು ಇಚ್ಛಿಸಿರಲಿಲ್ಲ. ಮತ್ತು ಹೆಂಡತಿಯೂ ಸಹ ಮಗಳ ಪರೀಕ್ಷೆಯ ನೆಪವನ್ನು ಒಡ್ಡಿ ಹೋಗಿರಲಿಲ್ಲ. ಅವರು ಬರದೇ ಇದ್ದುದಕ್ಕೆ ಮನಸ್ಸಿನೊಳಗೆ ತುಂಬ ಸಂತೋಷವನ್ನು ಪಟ್ಟಿದ್ದ.

ಕಾಲ ಮತ್ತು ನೆನಪುಗಳು ಪ್ರಜ್ಞೆಯ ಪರಿಮಿತಿಯನ್ನು ಮೀರಿ ಚಲನೆ.

'ಪ್ರಪೋಸ್ ಮಾಡಿದ ದಿನಾನೆ ಈ ಥರ ಕೇಳ್ತಾ ಇದೀನ ಅಂತ ಬೇಜಾರು ಮಾಡಿಕೊಳ್ಳಬೇಡ.'

'ಏನು?!' 'ಒಂದು ಪಕ್ಷ ಮುಂದೆ ಎಂದಾದರೂ ನಮ್ಮ ಇಬ್ಬರಲ್ಲಿ ಯಾರಾದರು ಒಬ್ಬರಿಗೆ ಡೈವೋರ್ಸ್ ತಗೋಬೇಕು ಅಂತ ಅನ್ನಿಸಿದರೆ?'

'ನವಿಲು ಕೂಗ್ತಾ ಇದೆ, ಕೇಳ್ತಾ?'

'ಉತ್ತರ ಇದಲ್ಲ' 'ನವಿಲು ನೋಡುವುದಕ್ಕೆ ಎಷ್ಟು ಚೆಂದ, ಆದರೆ ಅದರ ಧ್ವನಿ ಮಾತ್ರ ಕರ್ಕಶ. ಕರ್ಕಶವೇ ಸುಶ್ರಾವ್ಯ ಕೇಳ್ತಾ ಕೇಳ್ತಾ. ಅದೇ ಇಷ್ಟ ಆಗುತ್ತೆ'. ಆದರೂ ಕೇಳ್ತಾ ಇದ್ದರೆ ಅದನ್ನು ಒಪ್ಪಿಕೊಳ್ಳುತ್ತೀವಿ.' 'ಏನ್ ರೂಪಕವಾದ ಉತ್ತರ!'

ಶಹರ. ಅಲ್ಲಿ ನಕ್ಷತ್ರಗಳು. ಇಲ್ಲಿಯೂ ಮಿನುಗುತ್ತಿವೆ ವಿದ್ಯುತ್ತಿನ ದೀಪಗಳು. ತೈಲ ವರ್ಣಚಿತ್ರ. ತೇವದಲ್ಲಿ ಬೆಳಕಿನ ಬಲ್ಬುಗಳು. ಕಾಣುತ್ತಿಲ್ಲ ಗೋಡೆ. ವರ್ಣಚಿತ್ರ ಮಾತ್ರ. ತೈಲ ವರ್ಣ. ಕಟ್ಟಿನಿಂದಾಚೆ ಸೋರಿ ಹರಿದು ಹೋಗತ್ತಿದೆ ಬೆಳಕು. ಋಷಿಯಲ್ಲ, ಸನ್ಯಾಸಿಯಲ್ಲ, ಸಾತ್ವಿಕ ನಯನಗಳು. ಸುರುಳಿಯಾಕಾರದ ಬಳ್ಳಿ ಕೂದಲು. ನೋವು ಸೋಕಿ ಆನಂದ ಸೂಸುತ್ತಿದೆ. ಸೊಂಟದ ಮೇಲೆ ಅರಿವೆ ಇಲ್ಲ. ಜೀಕುತ್ತಿದೆ ಹೂದಳಗಲ್ಲದ ಕಂದ. ಇಲ್ಲ ನಿನ್ನ ಗಂಡ ಕೂಲಿ ಇಸಕೊಂಡು ಹೋದವನು ತೋಟದಲ್ಲಿ ಬಿದ್ದಿದ್ದಾನೆ. ಬೆಳ್ಳಿ ಚಮಚ ಅಡುಗೆ ಮನೆಯ ಆಚೆ ಬಂದು ಜಗುಲಿಯಲ್ಲಿ ಕೇಳಿಸಿಕೊಂಡು ನಗುತ್ತಿದೆ ಅಥವಾ ಅಳುತ್ತಿದೆ. ಹೆಂಗಸೊಬ್ಬಳು ಕದದ ಸಂದಿಯಲ್ಲಿ ಇಣುಕಿ ಜೀಕುತ್ತಿರುವ ಹಸುಗೂಸನ್ನು ನೋಡುತ್ತ ಒಳಗನ್ನಡಿಯಲ್ಲಿ ತನ್ನದೇ ಕೂಸಿನ ಪ್ರತಿರೂಪವ ಕಾಣುತಿಹಳು. ಹಾದರಗಿತ್ತಿ. ಅವನನ್ನು ಮುಗಿಸುತ್ತೇನೆ ಬಿಡಲ್ಲ. ಹೆಬ್ಬೆಟ್ಟಿನ ಗಾತ್ರದ ಹಕ್ಕಿ